
# ರಂಗಣ್ಣ ತನ್ನ ಅಂಗಡಿಯನ್ನು ಕೊರೊನ-ಪ್ರೂಫ್ ಮಾಡಿದ್ದು

COVID-೧೯: ಭಾರತೀಯ ವಿಜ್ಞಾನಿಗಳ ಪ್ರತಿಕಿಯೆ
(ಒಂದು ಸ್ವಯಂಪ್ರೇರಿತ ಗುಂಪು)

IndiSciCovid

https://indscicov.in/



Indian Scientists' Response to COVID-19

ಅಂಗಡಿ ಮತ್ತೆ ತೆರೆದಿದೆ - ರಂಗಣ್ಣನಿಗೆ ಇದು ಖುಷಿಯ ವಿಚಾರ. ರಂಗಣ್ಣ ಕಿರಾಣಿ ಅಂಗಡಿಯ ಮಾಲಿಕ. ಕಳೆದ ಹತ್ತು ದಿನಗಳಿಂದ ಅವನ ಅಂಗಡಿ ಮುಚ್ಚಿತ್ತು. "ಬರೀ ಹತ್ತು ದಿನಾನಾ? ಒಂದು ವರ್ಷವಾದಂತೆ ಅನಿಸಿದೆ" ಎಂದು ರಂಗಣ್ಣ ಹೇಳುತ್ತಾನೆ. ಲಾಕ್ಡೌನ್ ಶುರುವಾಗುತ್ತಿದ್ದಂತೆ ಕಿರಾಣಿ ಅಂಗಡಿಗಳು ಅಗತ್ಯ ವಸ್ತುಗಳನ್ನು ಮಾರಾಟ ಮಾಡುವುದರಿಂದ ಅವುಗಳನ್ನು ತೆರೆಯಲು ತಿಳಿಸಲಾಗಿತ್ತು. ಆದರೆ ಮೊದಲನೆಯ ದಿನ ಅವನು ಅಂಗಡಿ ತೆರೆದಾಗ ಪೊಲೀಸರು ತೊಂದರೆ ಕೊಟ್ಟಿದ್ದರಿಂದ ಅಂಗಡಿಯನ್ನು ಮುಚ್ಚಬೇಕಾಯಿತು. ಅವನು ಅಂಗಡಿ ತಲಪುವುದು ಸುಲಭವಲ್ಲ. ಅವನು ಸ್ಕೂಟರಿನಲ್ಲಿ ತನ್ನ ಅಂಗಡಿಗೆ ಹೋಗುತಿದ್ದ. ಆದರೆ ಈಗ ಪೊಲೀಸರು ಎಲ್ಲ ದ್ವಿಚಕ್ರವಾಹನಗಳನ್ನು ಜಪ್ತಿ ಮಾಡುತ್ತಿದ್ದಾರೆ.

ರಂಗಣ್ಣ, ಇಬ್ರಾಹಿಂ ಮತ್ತು ರಾಮಣ್ಣನನ್ನು ಸಂಪರ್ಕಿಸಿದ್ದಾನೆ. ಅವರೂ ಅಂಗಡಿಯನ್ನು ತೆರೆದಿಲ್ಲ. ಅವಶ್ಯ ವಸ್ತುಗಳ ಸರಬರಾಜು ಇಲ್ಲದ ಕಾರಣ ಅವರಿಗೆ ಕಷ್ಟವಾಗಿದೆ. ಅವರೆಲ್ಲರದ್ದು ಚಿಕ್ಕ ಅಂಗಡಿಗಳು. ಹೆಚ್ಚೆಂದರೆ 12 ಅಡಿ ಉದ್ದ ಹಾಗು 10 ಅಡಿ ಅಗಲ ಇರಬಹುದು. ಅವರ ಅಂಗಡಿಯೊಳಗೆ ಅಬಬ್ಬಾ ಅಂದರೆ ಒಬ್ಬ ವ್ಯಕ್ತಿ ನುಸುಳುವಷ್ಟು ಮೂರರಿಂದ ನಾಲ್ಕು ಅಡಿ ಕಿರಿದಾದ ಜಾಗವಿದೆ. ಅವನ ಅಂಗಡಿ ಇರುವ ಕಟ್ಟಡದಲ್ಲಿ ನಾಲ್ಕು ಅಂಗಡಿಗಳಿವೆ. ಒಂದರಲ್ಲಿ ಚಪ್ಪಲಿಗಳನ್ನು, ಇನ್ನೊಂದರಲ್ಲಿ ರೆಡಿಮೇಡ್ ಬಟ್ಟೆಗಳನ್ನು ಮಾರಾಟ ಮಾಡಲಾಗುತ್ತದೆ. ಕೊನೆಯದು ಫ್ಯಾನ್ಸಿ ಸ್ಟೋರ್. ಮಹಡಿಯಲ್ಲಿ ಒಂದು ಖಾಲಿ ಹೊಡೆಯೋ ಬ್ರೌಸಿಂಗ್ ಸೆಂಟರ್, ಹೀನಾಯ ಸ್ಥಿತಿಯ ಫೋಟೋ ಸ್ಟುಡಿಯೋ ಮತ್ತು ಬಡಾಯಿಕೋರ ರಿಯಲ್ ಎಸ್ಟೇಟ್ ಬ್ರೋಕರನ ಕಚೇರಿಗಳು ಇವೆ. ಅವೆಲ್ಲವೂ ಮುಚ್ಚಿರುವುದಷ್ಟೆ ಅಲ್ಲ, ಅವುಗಳಿಗೆ ಆಗಿರುವ ಒಂದು ತಿಂಗಳ ನಷ್ಟದಿಂದ ಸುಧಾರಿಸಿಕೊಳ್ಳುವುದು ಕಷ್ಟಸಾಧ್ಯವೆ ಸರಿ. ಅವರೊಂದಿಗೆ ಹೋಲಿಸಿದರೆ ರಂಗಣ್ಣನ ಪರಿಸ್ಥಿತಿಯೇ ಉತ್ತಮವಾಗಿದೆ.




ಕೊರೊನ ಸೋಂಕು ಹಬ್ಬುವ ಮೊದಲು ರಂಗಣ್ಣನ ಅಂಗಡಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ತೆರೆದಿರುತಿತ್ತು. ಅವನ ಮಗ ಸಿದ್ದು ಹೈಸ್ಕೂಲಿಗೆ ಹೋಗುತ್ತಾನೆ. ರಂಗಣ್ಣ ಮಧ್ಯಾಹ್ನನದ ಹೊತ್ತು ಊಟಕ್ಕೆ ತೆರಳಿ ವಿಶ್ರಾಂತಿಸುವಾಗ ಸಿದ್ದು ಅಂಗಡಿ ನೋಡಿಕೊಳ್ಳುತ್ತಾನೆ. ದೊಡ್ಡ ಮನೆಯವರು ಫೋನು ಮಾಡಿ ಕಿರಾಣಿ ತರಲು ಹೇಳಿದಾಗ ಸಿದ್ದು ಸೈಕಲ್ಲಿನಲ್ಲಿ ಅವರ ಸಾಮಾನುಗಳನ್ನು ತಲುಪಿಸುತ್ತಾನೆ.

ಲಾಕ್ಡೌನ್ ಹೇರಿದಾಗಿನಿಂದ ಪರಿಸ್ಥಿತಿಯು ಸುಧಾರಿಸಿದ್ದರಿಂದ ಅವನು ಅಂಗಡಿಯನ್ನು ಮತ್ತೆ ತೆರೆಯಬಹುದಾಗಿದೆ. ರಂಗಣ್ಣ ಪೋಲಿಸರನ್ನು ಭೇಟಿ ಮಾಡಿ ಅಂಗಡಿ ತೆರೆಯಲು ಅನುಮತಿ ಪಡೆದಿದ್ದಾನೆ. ಪೊಲೀಸರು, ಸರ್ಕಾರ ಹೊರಡಿಸಿರುವ - ಏನು ಮಾಡಬೇಕು ಮತ್ತು ಯಾವುದೆಲ್ಲಾ ನಿಷಿದ್ಧವೆಂಬ ಮಾಹಿತಿ ಚೀಟಿಯನ್ನು ರಂಗಣ್ಣನಿಗೆ ಕೊಟ್ಟಿದ್ದಾರೆ.

ಕೇವಲ ಒಬ್ಬರಿಗೆ ಮಾತ್ರ ಪ್ರವೇಶ. ರಂಗಣ್ಣ ಮತ್ತು ಅವನ ಮಗ ಸಿದ್ದು ಅಂಗಡಿಯೊಳಗೆ ಇರುವುದರಿಂದ ಇತರರಿಗೆ ಒಳ ಬರುವುದು ಸಾಧ್ಯವೂ ಇಲ್ಲ. ಹಾಗಾಗಿ ಇದೇನು ದೊಡ್ಡ ಸವಾಲಲ್ಲ.

ಗ್ರಾಹಕರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಎಚ್ಚರಿಕೆ ವಹಿಸಬೇಕು : ರಂಗಣ್ಣ ಹೊರಗಡೆ ಆರು ಅಡಿಗಳ ಅಂತರದಲ್ಲಿ ಬಳಪದಿಂದ ವೃತ್ತಗಳನ್ನು ಬರೆದಿದ್ದಾನೆ. ಆದರೆ ಗ್ರಾಹಕರು ಪಾಲಿಸುವವರೆಂದು ಖಾತ್ರಿಯಾಗಿ ಹೇಳಲಾರ. ದೊಡ್ಡದಾಗಿ ಹಾಳೆಯ ಮೇಲೆ ಎಲ್ಲರೂ ಆ ವೃತ್ತದೊಳಗೆ ನಿಲ್ಲಬೇಕೆಂದು ಬರೆದು ಗೋಡೆಗೆ ಅಂಟ್ಟಿಸಿದ್ದಾನೆ. ಸಿದ್ದುಗೆ ಆಗಾಗ ವೃತ್ತಗಳನ್ನು ತೀಡುವಂತೆ ಹೇಳಿದ್ದಾನೆ.



ದಾಸ್ತಾನುಗಳನ್ನು ತೆಗೆದುಕೊಳ್ಳುವಾಗ ಅಂತರ ಕಾಯ್ದುಕೊಳ್ಳುವುದು ಅವನಿಗೆ ಕಷ್ಟವೇನಲ್ಲ. ಸಧ್ಯದಲ್ಲಿ ಹೆಚ್ಚೇನು ದಾಸ್ತಾನುಗಳು ಬರುತ್ತಿಲ್ಲ. ರಂಗಣ್ಣನೇ ಸಗಟು ಮಾರುಕಟ್ಟೆಯಿಂದ ಸಾಮಾನುಗಳನ್ನು ತಂದು ಸಂಗ್ರಹಿಸಿಡುತಿದ್ದದ್ದು. ಈಗ ಸ್ಕೂಟರ್ ಹಾಗು ಬಸ್ಸುಗಳಿಲ್ಲದೆ ಹೇಗೆ ಸಾಮಗ್ರಿಗಳನ್ನು ತರುವುದೆಂದು ರಂಗಣ್ಣನಿಗೆ ತೋಚುತ್ತಿಲ್ಲ.

ರಂಗಣ್ಣ ಮುಖಗವುಸನ್ನು (ಮಾಸ್ಕ್) ಹಾಕಿಕೊಂಡಿದ್ದಾನೆ. ಮನೆಯಲ್ಲಿ ಮರುಬಳಸಬಹುದಾದ ಬಟ್ಟೆಯ  ಮುಖಗವುಸುಗಳಿವೆ. ಅವುಗಳನ್ನೆ ಒಗೆದು ಉಪಯೋಗಿಸುತ್ತಾನೆ. ಆದರೆ ಕೈಚೀಲ (ಗ್ಲವ್ಸ್), ಟೋಪಿ , ಮೇಲುಹೊದಿಕೆಗಳು ಅವನಲ್ಲಿಲ್ಲ. ಹಿಂದೆಂದೂ ಅವುಗಳನ್ನು ಬಳಸಿದ ಅನುಭವವಿಲ್ಲ ಹಾಗೂ ಅವುಗಳನ್ನು ಹಾಕಿಕೊಂಡು ಈ ಬಿಸಿಲಿನಲ್ಲಿ ಕೆಲಸ ಮಾಡಲು ಸಾಧ್ಯವೇ? ಎಲ್ಲಾ ಅಂಗಡಿಗಳು ಮುಚ್ಚಿ ರುವಾಗ ಇವುಗಳನ್ನು ಎಲ್ಲಿಂದ ಕೊಳ್ಳುವುದು?.

ಗ್ರಾಹಕರಿಗೆ ಮುಖಗವುಸನ್ನು ಧರಿಸುವಂತೆ ತಿಳಿಸುತ್ತಾನ. ಆದರೆ ಒತ್ತಾಯ ಮಾಡಲು ಆದೀತೆ? ಪೊಲೀಸರು ಬಂದು ಗ್ರಾಹಕರು ಮುಖಗವುಸನ್ನು ಧರಿಸುವಂತೆ ನೋಡಿಕೊಳ್ಳುವರೆ?.



ಸೋಪು ವೈರಸನ್ನು ಕೊಲ್ಲುತದೆಂದು ರಂಗಣ್ಣ ದಿನಪತ್ರಿಕೆಯಲ್ಲಿ ಓದಿದ್ದಾನೆ. ಅವನಲ್ಲಿ ಸಾಕಷ್ಟು ಸೋಪಿದೆ. ಒಂದು ಬಕೆಟಿನಲ್ಲಿ ಸೋಪಿನ ನೀರು ಇಡಬೇಕೆಂದು ತೀರ್ಮಾನಿಸಿದ್ದಾನೆ. ಜಾಗರೂಕನಾಗಿರಲು ಪ್ರತಿ ಒಂದು ಗಂಟೆಗೆ ಎಲ್ಲಾ ಮೇಲ್ಮೈಗಳನ್ನು ಒರೆಸಬೇಕೆಂದು ನಿರ್ಧರಿಸಿದ್ದಾನೆ. ಯಾರಾದರೂ ಕೆಮ್ಮಿರುವವರಿದ್ದರೆ ಅವರಿಗೆ ಅಂಗಡಿಯ ಯಾವ ಸಾಮಾನಿನ ಬಳಿಯೂ ಬರದಂತೆ ಎಚ್ಚರಿಕೆವಹಿಸುವವನಿದ್ದಾನೆ. ಅವರಿಗೆ ಹೊರಗಡೆಯೇ ಎಲ್ಲವನ್ನು ಸರಬರಾಜು ಮಾಡುವವನಿದ್ದಾನೆ. ಅಂಗಡಿಯಲ್ಲಿ ಶಿಸ್ತಿನಿಂದಿರಬೇಕೆಂದು ಸಿದ್ದುಗೆ ಅವನಿಗೆ ಅರ್ಥವಾಗುವಂತೆ ತಿಳಿಸಿದ್ದಾನೆ.

ಹತ್ತಿರದಲ್ಲಿರುವ ಮನೆಗಳಿಗಷ್ಟೇ ಸಾಮಗ್ರಿಗಳನ್ನು ತಲುಪಿಸುವ ಅವಕಾಶವಿದೆ. ಲಾಕ್ಡೌನ್ ಹೇರಿರುವ ಸಮಯದಲ್ಲಿ ಸಿದ್ದುನನ್ನು ದೂರ ಕಳಿಸಲು ರಂಗಣ್ಣ ತಯಾರಿಲ್ಲ. ಮನೆಗೆ ಹೋಗಿ ಕೊಡುವಾಗ ಸಿದ್ದು ಮುಖಗವುಸನ್ನು ಧರಿಸಿರುತ್ತಾನೆ, ಅವರ ಮನೆಯ ಹೊರಗೇ ಸಾಮಗ್ರಿಗಳಿರುವ ಬುಟಿಯನ್ನಿಟ್ಟು ಕಾಯುತ್ತಾನೆ. ಗ್ರಾಹಕರಿಗೆ ತನ್ನ ಚಿಕ್ಕ ಡಬ್ಬದಲ್ಲಿ ಹಣ ಹಾಕುವಂತೆ ಹೇಳುತ್ತಾನೆ. ಸಿದ್ದುಗೆ ಎಚ್ಚರಿಕೆಯಿಂದಿರಲು ರಂಗಣ್ಣ ತಿಳಿಸಿದ್ದಾನೆ. ಸಿದ್ದುಗೆ ಕೆಮ್ಮು ಜ್ವರದ ಲಕ್ಷಣಗಳು ಕಾಣಿಸಿಕೊಂಡರೆ ಅಂಗಡಿಯನ್ನು ಅನಿವಾರ್ಯವಾಗಿ ಮುಚ್ಚಲೇಬೇಕಾಗುತ್ತದೆ. ಕಿರಿಯ ವಯಸ್ಸಿನ ಸಿದ್ದುವೇನೋ ಉತ್ಸಾಹದಿಂದಿದ್ದಾನೆ. ಆದರೆ ರಂಗಣ್ಣ ಆತಂಕದಲ್ಲಿದ್ದಾನೆ.



ಆ ಕಟ್ಟಡದಲ್ಲಿ ಕೇವಲ ಒಂದೇ ಕೊಳಕು ಶೌಚಾಲಯವಿರುವುದು ರಂಗಣ್ಣನಿಗೆ ದೊಡ್ಡ ತಲೆ ನೋವಾಗಿದೆ. ಯಾರೂ ಇಲ್ಲದಿದ್ದರಿಂದ, ನೀರು ಮತ್ತು ವಿದ್ಯುತ್ ಸರಬರಾಜನ್ನು ಕಳೆದ ಹತ್ತು ದಿನಗಳಿಂದ ನಿಲ್ಲಿಸಲಾಗಿದೆ. ತನ್ನ ಅಂಗಡಿಗೆ ಮಾತ್ರ ನೀರು ಮತ್ತು ವಿದ್ಯುತ್ ಸೌಲಭ್ಯ ಒದಗಿಸುವಂತೆ ಮಾಲೀಕರಲ್ಲಿ ಜಗಳವಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ನೀರೇನೋ ಬರುತ್ತಿದೆ ಆದರೆ ಕಾಪಿಯ ಹಾಗೆ ಕಂದು ಬಣ್ಣವಾಗಿದೆ.

ಅಂಗಡಿಯನ್ನು ಆಗಾಗ್ಗೆ ಸ್ವಚ್ಛಗೊಳಿಸಲು ಸರಿಯಾದ ನೀರಿನ ಸರಬರಾಜು ಇದ್ದರೆ, ರಂಗಣ್ಣ ಗ್ರಾಹಕರಿಗೆ ಸುರಕ್ಷಿತವಾಗಿ ಅಗತ್ಯ ವಸ್ತುಗಳನ್ನು ಪೂರೈಸಲು ಸಿದ್ಧನಾಗಿದ್ದಾನೆ.

ಇಲ್ಲಿ ಚಿತ್ರಿಸಿರುವ ಸನ್ನಿವೇಶಗಳು ಕೇವಲ ಕಾಲ್ಪನಿಕ ಮತ್ತು ಸಾಂದರ್ಭಿಕವಾಗಿರುತ್ತವೆ. ಇವುಗಳಲ್ಲಿ ಬಹಳಷ್ಟನ್ನು ನಿರೂಪಣೆಗಾಗಿ ಸರಳೀಕರಿಸಲಾಗಿದೆ. ಇದರ ಸಂಪೂರ್ಣ ವೈಜ್ಞಾನಿಕ ನಿಖರತೆಗೆ ಈ ಲೇಖನಗಳೊಂದಿಗಿರುವ ಇತರೆ ಜಾಲತಾಣಗಳನ್ನು ಹಾಗೂ ಲೇಖನಗಳನ್ನು ನೋಡಿ.

